## ಸೆಲೆಬ್ರಿಟಿ

■ ಹನಿ

# ಮದುವೆ ಮತ್ತು ಮಗು

ಮದುವೆಗಳು ಸ್ವರ್ಗದಲ್ಲೇ ನಡೆಯುತ್ತವೆ. ಆದರೆ ಡೈವೋರ್ಸ್‌ಗಳು ಭೂಮಿಯ ಮೇಲೆ ಅದಕ್ಕಿಂತ ವೇಗವಾಗಿ ನಡೆಯುತ್ತವೆ. ವಿಶ್ವದ 'ನಂಬರ್ ಒನ್' ಡಬಲ್ಸ್ ಟೆನಿಸ್ ಆಟಗಾರನಾಗಿದ್ದ ಲಿಯಾಂಡರ್ ಪೇಸ್ (ಈಗ ನಂ.6) ಮತ್ತು ಖ್ಯಾತ ಮಾಡೆಲ್ ರಿಯಾ ಪಿಳ್ಳೈ ಅವರ ಮದುವೆಯೂ ಸ್ವರ್ಗ ಸಮಾನವಾಗಿರುತ್ತದೆ ಎಂದು ಸ್ನೇಹಿತರು ಭಾವಿಸಿದ್ದರು. ಏಕೆಂದರೆ ಇಬ್ಬರೂ ತಮ್ಮ ಕ್ಷೇತ್ರಗಳಲ್ಲಿ ಅದ್ವಿತೀಯ ಸಾಧನೆ ಮಾಡಿದವರೇ. ಗೋವಾಕ್ಕೆ ಹೋಗುವ ವಿಮಾನದಲ್ಲಿ ಪೇಸ್‌ಗೆ ರಿಯಾಳ ಪರಿಚಯವಾದಾಗ ಆಕೆ ಅದಾಗಲೇ ಸಂಜಯ್ ದತ್‌ನನ್ನು ಮದುವೆಯಾಗಿ, ಸಂಬಂಧ ಹಳಸಿತ್ತು. ಡೈವೋರ್ಸ್ ಕೂಡಾ ಮುಗಿದಿತ್ತು. 1998ರಲ್ಲಿ ಮದುವೆಯಾಗಿ 2002ರಲ್ಲಿ ಸಂಜಯ್ ದತ್‌ನನ್ನು ಬಿಟ್ಟ ರಿಯಾ, ಪೇಸ್‌ನನ್ನು ಮದುವೆಯಾದದ್ದು 2005ರಲ್ಲಿ. ಈಗ ಇವರಿಬ್ಬರ ಸಂಬಂಧವೂ ಹಳಸಿ ಡೈವೋರ್ಸ್ ಬಾಗಿಲಲ್ಲಿ ನಿಂತಿದೆ. 6 ವರ್ಷದ ಮಗಳು ಐಯಾನಳನ್ನು ಸಾಕುವ ಹಕ್ಕಿಗಾಗಿ ಲಿಯಾಂಡರ್ ಪೇಸ್ ಕೋರ್ಟಿಗೆ ಅರ್ಜಿ ಹಾಕಿದ್ದಾರೆ. 'ಮಗಳನ್ನು ತಂದೆಗೆ ಒಪ್ಪಿಸಲು ಖಂಡಿತಾ ಸಾಧ್ಯವಿಲ್ಲ' ಎಂದು ರಿಯಾ ಹಠ ಹಿಡಿದಿದ್ದಾಳೆ. 'ಡೈವೋರ್ಸ್ ಕೂಡಾ ಕೊಡುವುದಿಲ್ಲ. ನನಗೆ ಮತ್ತು ಮಗಳಿಗೆ ಬದುಕಲು ಸಾಕಷ್ಟು ಅನುಕೂಲ ಮಾಡಿಕೊಡಲಿ, ಅಲ್ಲಿಯವರೆಗೂ ಪೇಸ್‌ನನ್ನು ಬಿಡುವುದಿಲ್ಲ' ಎನ್ನುವುದು ರಿಯಾಳ ಚಾಲೆಂಜ್!

ಮುಂಬೈಯಲ್ಲಿರುವ ಐಷಾರಾಮಿ ಫ್ಲಾಟ್‌ನಲ್ಲಿ ಪೇಸ್ ಮತ್ತು ರಿಯಾಳ ಜತೆಗೆ ಪೇಸ್‌ನ ಅಪ್ಪ– ಅಮ್ಮ ಕೂಡಾ ವಾಸಿಸುತ್ತಿದ್ದರು. ಈಗ ಈ ಬಂಗ್ಲೆಯಿಂದ ತಮ್ಮನ್ನು ಬಲವಂತವಾಗಿ ಹೊರ ಹಾಕಲು ಯತ್ನಿಸಲಾಗಿದೆ ಎಂದು ರಿಯಾ ಪೊಲೀಸರಿಗೆ ದೂರು ನೀಡಿದ್ದಾಳೆ. 'ಅವಳ ಕೋಣೆಯನ್ನು ನಾವು ಮುಟ್ಟಿಲ್ಲ. ಪೇಸ್ ಹೆತ್ತವರು ಇರುವ ಕೋಣೆಯ ರಿಪೇರಿಗೆ ಯತ್ನಿಸಲಾಗಿದೆ. ಅಷ್ಟಕ್ಕೇ ರಿಯಾ ಹಾದಿ–ಬೀದಿ ರಂಪ ಮಾಡಿದ್ದಾಳೆ' ಎನ್ನುವುದು ಪೇಸ್ ವಕೀಲರ ಮಾರುತ್ತರ. 'ಸೆಲೆಬ್ರಿಟಿ ಗಂಡು– ಹೆಣ್ಣು ಮದುವೆಯಾದರೆ ಯಾರಾದರೂ ಒಬ್ಬರು ಹೇಳಿದಂತೆ ಇನ್ನೊಬ್ಬರು ಕೇಳಬೇಕು. ಇಲ್ಲವಾದಲ್ಲಿ ವಿಚ್ಛೇದನ ಖಂಡಿತಾ' ಎನ್ನುವ ಸೈಕಾಲಜಿಯ ತತ್ವ ಇಲ್ಲಿ ನಿಜವಾದಂತಿದೆ. ಆಸೀಸ್, ಫ್ರೆಂಚ್, ವಿಂಬಲ್ಡನ್, ಅಮೆರಿಕನ್ ಓಪನ್ ಸಹಿತ ಒಟ್ಟು 53 ಟೂರ್ನಿಗಳಲ್ಲಿ ಪೇಸ್ ಟೈಟಲ್ ಗೆದ್ದಿದ್ದಾರೆ. ಆದರೆ ಹೆಂಡತಿಯ ವಿರುದ್ಧ ಕೇಸ್ ಗೆಲ್ಲುವುದು ಕಷ್ಟ ಎನ್ನುತ್ತಿದ್ದಾರೆ ವಕೀಲರು. ರಿಯಾ ಕೂಡಾ ಆರ್ಟ್ ಆಫ್ ಲಿವಿಂಗ್‌ನಲ್ಲಿ ಇನ್ಸ್‌ಸ್ಟ್ರಕ್ಟರ್. ಬದುಕುವುದು ಹೇಗೆಂದು ಇತರರಿಗೆ ಕಲಿಸುವ ರಿಯಾಗೆ ಸ್ವತಃ ಬದುಕುವ ಕಲೆ ಗೊತ್ತಿಲ್ಲ ಎನ್ನುವುದು ತಮಾಷೆಯಾಗಿದೆ!



■



# 'ಗಾಯ'ಕನ ಬಂಧನ

ಕಳೆದ ವರ್ಷ ಬಿಡುಗಡೆಯಾದ ಆಶಿಕಿ–2 ಚಿತ್ರದ 'ಸೂಪರ್‌ಹಿಟ್' ಹಾಡು ಸುನ್ ರಹಾ ಹೈ ನತೂ..! ಈ ಹಾಡಿನ ಗಾಯಕ ಮತ್ತು ಸಂಗೀತ ನಿರ್ದೇಶಕ ಅಂಕಿತ್ ತಿವಾರಿ, ದಿನ ಬೆಳಗಾಗುವುದರೊಳಗೆ ಬಾಲಿವುಡ್‌ನ ಕಣ್ಮಣಿ ಆಗಿಬಿಟ್ಟ. ಸಂಗೀತ ನಿರ್ದೇಶನಕ್ಕಾಗಿ ಐಫಾ, ಫಿಲಂಫೇರ್ ಪ್ರಶಸ್ತಿಗಳನ್ನು ಬಾಚಿಕೊಂಡ. ಇನ್ನೂ 24ರ ಹರೆಯದಲ್ಲಿ ತಾರೆಯಾದ ಅಂಕಿತ್, ಇದೀಗ ರೇಪ್ ಕೇಸ್‌ನಲ್ಲಿ ಸಿಕ್ಕುಬಿದ್ದು ಬದುಕನ್ನು ತಾರಾತಿಗಡಿ ಮಾಡಿಕೊಂಡಿದ್ದಾನೆ. ಬಾಲಿವುಡ್‌ನಲ್ಲಿ ಇತ್ತೀಚೆಗೆ ರೇಪ್ ಕೇಸ್‌ನಲ್ಲಿ ಸಿಕ್ಕು ಬೀಳುತ್ತಿರುವ ಮೂರನೇ ಸೆಲೆಬ್ರಿಟಿಯೀತ. ಶೈನಿ ಅಹುಜಾ ಎನ್ನುವ ಶೈನಿಂಗ್ ನಟ ಕೆಲಸದಾಕೆಯನ್ನು ರೇಪ್ ಮಾಡಿ 7 ವರ್ಷದ ಜೈಲು ವಾಸಕ್ಕೆ ತೆರಳಿದೆ, ಹೀರೊ ಇಂದರ್‌ಕುಮಾರ್ ಕೆಲಸ ಕೊಡಿಸುತ್ತೇನೆಂದು ಸಹನಟಿಯನ್ನು ರೇಪ್ ಮಾಡಿ ಪೊಲೀಸರ ಬಂಧನದಲ್ಲಿ ಇದ್ದಾನೆ. ಇದೀಗ ಅಂಕಿತ್ ಬಂಧನದ ಸರದಿ.

ಕಾನ್ಪುರ ಹುಡುಗ ಅಂಕಿತ್, ಮನೆಯಲ್ಲಿ ಸಂಗೀತದ್ದೇ ವಾತಾವರಣ. ತಂದೆಯದ್ದೇ ಸಂಗೀತ ತಂಡವೊಂದಿದೆ. ತಾಯಿ ಭಕ್ತಿಗೀತೆಗಳನ್ನು ಹಾಡುತ್ತಾರೆ. ಚಿಕ್ಕಂದಿನಿಂದಲೇ ದಿನಕ್ಕೆ 12 ಗಂಟೆ ರಿಯಾಜ್ ಮಾಡುತ್ತಿದ್ದ ಅಂಕಿತ್, ಮೊದಲು ಟೀವಿ ಸೀರಿಯಲ್‌ಗಳಲ್ಲಿ ಮಿಂಚಿದ. ಸೋನಿ ಟಿವಿ, ಸ್ಟಾರ್ ಪ್ಲಸ್, ಕಲರ್ಸ್ ಚಾನೆಲ್ ವೀಕ್ಷಕರಿಗೆ ಅಂಕಿತ್ ಚಿರಪರಿಚಿತ ಧ್ವನಿ. ಈತ ಸಂಗೀತ ನೀಡಿದ 'ದೋ ದೂನಿ ಚಾರ್' ಮತ್ತು 'ಸಾಹೆಬ್, ಬೀವಿ ಔರ್ ಗ್ಯಾಂಗ್‌ಸ್ಟರ್' ಚಿತ್ರಗಳೂ ಚೆನ್ನಾಗಿ ಓಡಿದವು. ಆದರೆ ಆಶಿಕಿ–2 ಈತನನ್ನು ಸೂಪರ್‌ತಾರೆಯಾಗಿಸಿತು.

ಈತ ಸಂಗೀತ ನೀಡಿದ 'ಏಕ್ ವಿಲನ್' 2014ರಲ್ಲಿ ಬಿಡುಗಡೆಯಾಗಬೇಕು. ಅಷ್ಟರಲ್ಲೇ ಅಂಕಿತ್ ವಿಲನ್ ಆಗಿದ್ದಾನೆ. ಈತನ ಮೇಲೆ ರೇಪ್ ಕೇಸ್ ಹಾಕಿರುವ ಬಹುಕಾಲದ ಗೆಳತಿ, ಈತನಿಗೆ ಸದ್ಯಕ್ಕೆ ಬಿಡುಗಡೆ ಒದಗಿಸುವಂತೆ ಕಾಣಿಸುತ್ತಿಲ್ಲ.

■

Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65